Calling Attention to Matters of Urgent Public Importance

(i) re : quarry work near ancient cave temple of Ramalingeswara near Hulimavu

SRI T. R. SHAMANNA (Fort).— I call the attention of the Chief Minister to the danger to the ancient cave temple of Ramalingeswara near Hulimavu, Banneraghatta Road, due to quarry work near the temple.

SRI N. HUCTCHAMASTHI GOWDA (Minister for Revenue).—Madam I wish to make the following statement on behalf of the Chief Minister.—

The quarries near Hulimavu area in Bangalore South Taluk have been inspected by an officer of the Department of Mines and Geology. It has been reported that 3 lessees are operating the quarries beyond 200 feet safety Zone marked from Ramalingeswara Cave Temple. One of the lessees, M/s. Gayathri Industrial Enterprises, who was working the quarries on a large scale, had given an undertaking at the time of execution of the lease that they would not resort to blasting within 300 metres of the cave temple. But, it has been reported that a crack has developed along the exposed portion in East West direction at a distance of 60 ft. to 80 ft. from the temple towards its north side. In view of this, action has been taken by the Department to stop all the quarrying in this area pending taking action against the lessee.

The Director of Mines and Geology has also been instructed to terminate all mining/quarry leases around the temple.

ಶ್ರೀ ಟಿ. ಆರ್. ಶಾಮಣ್ಣ.— ಮಾನ್ಯ ಮಂತ್ರಿಗಳಾದ ಶ್ರೀಮಾನ್ ಹುಚ್ಚಮಾಸ್ತಿಗೌಡರು ಆ ರಾಮಲಿಂಗೇಶ್ವರ ದೇವಸ್ಥಾನದಲ್ಲಿರತಕ್ಕ ಗುಹೆಯನ್ನು ನೋಡಿದ್ದಾರೆ ಎಂದು ಕಾಣುತ್ತದೆ. ಅದು ಬಹಳ ವಿಶಾಲವಾದ ಗುಹೆ ಮತ್ತು ಅಪರೂಪವಾದಂತಹ ಗುಹೆ. ಅದು ಒಳ್ಳೆಯ ಪ್ರೇಕ್ಷಣೀಯವಾದ ಸ್ಥಳ ಎಂದಾಗಿದೆ. ಆ ಗುಹೆ ನಮ್ಮ ವಿಧಾನಸೌಧದ ಅಸೆಂಬ್ಲಿ ಹಾಲಿನಷ್ಟಾಗೆ ವಿಶಾಲವಾದ ಗುಹೆ ಇದೆ. ಅಲ್ಲಿ ದೇವಸ್ಥಾನ ಬೇರೆ ಇದೆ. ಆಲ್ಲಿ ಅನೇಕ ಸಾಮೂಹಿಕ ಮಂಡಿಗೆಗಳು ಆಗುತ್ತವೆ. ಅದು ಒಂದು ಒಳ್ಳೆಯ ಸುಂದರವಾದ ಪ್ರೇಕ್ಷಣೀಯವಾದ ಗುಹೆ. ಆದ್ದರಿಂದ ಇದರ ಪಕ್ಕದಲ್ಲಿರತಕ್ಕ ಕ್ವಾರಿಯಲ್ಲಿ ಆಗಿಂದಾಗ್ಗೆ ಕಲ್ಲುಗಳನ್ನು ತೆಗೆದುಕೊಳ್ಳುವುದಕ್ಕೆ ಬ್ಲಾಸ್ಟಿಂಗ್ ಮಾಡುವುದರಿಂದ ಕ್ವಾರಿಯನ್ನು ದೊಡ್ಡದು ಮಾಡುತ್ತಾ ಹೋಗುವುದರಿಂದ ದೇವಸ್ಥಾನ ಮತ್ತು ಗುಹೆಗೆ ತೊಂದರೆಯಾಗುತ್ತದೆ. ಆದ್ದರಿಂದ ಆಲ್ಲಿ ಕ್ವಾರಿಯಿಂಗ್ ಮಾಡುವುದನ್ನು ತಪ್ಪಿಸಲು ತೀವ್ರವಾಗಿ ಕ್ರಮ ತೆಗೆದುಕೊಳ್ಳುವುದಕ್ಕೆ ಆಶ್ವಾಸನೆ ಕೊಡುತ್ತೀರಾ ?

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಆಲ್ಲಿನ ಕಂಟ್ರಾಕ್ಟರ ಲೀಜನ್ನು ವಜಾ ಮಾಡಬೇಕು ಎಂದು ಈಗಾಗಲೇ ಆಜ್ಞೆ ಮಾಡಿದ್ದೇವೆ. ಇದರ ಜೊತೆಗೆ ಆ ದೇವಸ್ಥಾನದ ಸುತ್ತಮುಂತ್ತ ಪ್ರೊಹಿಬಿಟೆಡ್ ಏರಿಯಾ ಎಂದು ಮಾಡಿ ಯಾರಾದರೂ ಆಲ್ಲಿಗೆ ಬಂಡೆ ಒಡೆಯುವುದಕ್ಕೆ ಪ್ರಯತ್ನ ಮಾಡುವುದಾಗಲೀ ಮತ್ತು ಇತರೆ ದುರುದ್ದೇಶದಿಂದ ಆ ಸ್ಥಳದಲ್ಲಿ ಏನಾದರೂ ಅನಾನುಕೂಲ ಮಾಡಿದರೆ ಅದನ್ನು ತಡೆಗಟ್ಟುವ ತಕ್ಕ ಯೋಚನೆ ಕೂಡ ಆಗಿದೆ.

ಶ್ರೀ ಎಸ್. ಬಂಗಾರಪ್ಪ (ಸೊರಬ).—ಸ್ವಾಮಿ ಶಿವಮೊಗ್ಗ ಜಿಲ್ಲೆಯ ಸೊರಬ ಹಾಗೂ ಇತರ ತಾಲ್ಲೂಕುಗಳಲ್ಲಿ ದರಖಾಸ್ತು ಜಮೀನನ್ನು ನೀಡುವುದರ ಬಗ್ಗೆ ನಿಷೇದಾಜ್ಞೆಯನ್ನು ಹೊರಡಿಸಿರುವ ವಿಚಾರದ ಕಡೆಗೆ ನಾನು ಮಾನ್ಯ ಕಂದಾಯ ಮಂತ್ರಿಗಳ ಗಮನವನ್ನು ಸೆಳೆಯುತ್ತೇನೆ.

10-00 A.M.

(ii) Re :—orders prohibiting issue of lands on "Darkhast" in the Sorab Taluk etc., of Shimoga District.

SRI S. BANGARAPPA (SORAB).—Sir, I call the attention of the Minister for Revenue to the orders prohibiting the issue of lands on "Dharkhast" in Soraba Taluk and other taluks of Shimoga District.

ಶ್ರೀ ಎನ್. ಹುಚ್ಚಮಾಸ್ತಿಗೌಡ (ಕಂದಾಯ ಶಾಖೆಯ ಮಂತ್ರಿಗಳು).—ಈ ಗಮನ ಸೆಳೆಯುವ ಸೂಚನೆಯ ಬಗ್ಗೆ ನನ್ನ ಹೇಳಿಕೆ ಈ ರೀತಿ ಇದೆ.—

ರೈತರಿಗೆ ನೀರಾವರಿ ಸೌಲಭ್ಯಗಳನ್ನು ಒದಗಿಸಿ ಅಧಿಕ ಆಹಾರ ಉತ್ಪಾದನೆ ಮಾಡುವ ಕಾರ್ಯದಲ್ಲಿ ನೆರವನ್ನು ನೀಡುವ ಉದ್ದೇಶದಿಂದ ರಾಜ್ಯದ ನಾನಾ ಭಾಗಗಳಲ್ಲಿ ನದಿಗಳಿಗೆ ಅಣೆಕಟ್ಟೆಗಳನ್ನು ಹೇರಳವಾಗಿ ಹಣವ್ಯಯ ಮಾಡಿ ನಿರ್ಮಿಸಲಾಗಿದೆ ಮತ್ತು ನಿರ್ಮಿಸಲಾಗುತ್ತಿದೆ. ಹೀಗೆ ನಿರ್ಮಿಸಲಾಗಿರುವ ಅಣೆಕಟ್ಟೆಗಳಲ್ಲಿ ತುಂಗಭದ್ರಾ ಅಣೆಕಟ್ಟೆಯೂ ಒಂದು. ಯಾವ ಉದ್ದೇಶಕ್ಕಾಗಿ ಅಣೆಕಟ್ಟೆಯನ್ನು ನಿರ್ಮಿಸಲಾಗಿರೆಯೋ ಆ ಉದ್ದೇಶವು ಸಫಲವಾಗಬೇಕಾದರೆ ಅದನ್ನು ಸುರಕ್ಷಿತವಾಗಿಟ್ಟುಕೊಳ್ಳುವುದು ಅತ್ಯವಶ್ಯಕ. ಕಾರಣ ತುಂಗಭದ್ರಾ ಅಣೆಕಟ್ಟೆಗೆ ಬರುವ ನೀರಿನೊಂದಿಗೆ ಬಂದು ಶೇಖರಿತವಾಗುವ ಮಣ್ಣನ್ನು ಬಾಧಿಸದಂತೆ ತಡೆಯುವದಕ್ಕೋಸ್ಕರ ಮತ್ತು ತುಂಗಭದ್ರಾ ಅಣೆಕಟ್ಟೆಗೊಳಪಟ್ಟ ಪ್ರದೇಶದಲ್ಲಿ ಭೂ ಸವಕಳಿಯನ್ನು ತಡೆಯುವುದಕ್ಕಾಗಿ ತುಂಗಭದ್ರಾ ಯೋಜನೆಯ ಆಡಳಿತಾಧಿಕಾರಿಯವರ ಮತ್ತು ಭೂ ಸಂರಕ್ಷಣಾಧಿಕಾರಿಯವರ ಕೋರಿಕೆಯ ಮೇರೆಗೆ ತುಂಗಭದ್ರಾ ಮಿಳುಗಡೆಯ ಪ್ರದೇಶದಲ್ಲಿಯ ಯಾವತ್ತೂ ಸರಕಾರಿ ಫಡ ಭೂಮಿಯನ್ನು ಅರಣ್ಯ ಖಾತೆಯವರಿಗೆ ಕಾಡು ಬೆಳೆಸಲು ವರ್ಗಾಯಿಸುವಂತೆ ಬಳ್ಳಾರಿ, ಚಿತ್ರದುರ್ಗ, ಶಿವಮೊಗ್ಗ, ಚಿಕ್ಕಮಗಳೂರು, ಉತ್ತರ ಕನ್ನಡ, ಧಾರವಾಡ ಮತ್ತು ರಾಯಚೂರು ಜಿಲ್ಲಾಧಿಕಾರಿಗಳಿಗೆ ದಿನಾಂಕ ೭ನೇ ಜನವರಿ ೧೯೭೨ರಂದು ಆದೇಶ ನೀಡಲಾಗಿದೆ. ಅದರಂತೆ ಸಂಬಂಧಪಟ್ಟ ಕಂದಾಯ ಇಲಾಖಾಧಿಕಾರಿಗಳು ಕ್ರಮ ತೆಗೆದುಕೊಳ್ಳುತ್ತಿದ್ದಾರೆ. ಹೀಗೆ ಮಾಡದೆ ಹೋದಲ್ಲಿ ಹೇರಳವಾಗಿ ಹಣ ವ್ಯಯಮಾಡಿ ನಿರ್ಮಿಸಲಾದ ಅಣೆಕಟ್ಟುಗಳಿಂದ ನಿರ್ದಿಷ್ಟ ಲಾಭಗಳು ದೊರೆಯದೆ ಹೋಗಬಹುದು.

ಆದರೆ ಶಿವಮೊಗ್ಗ, ಚನ್ನಗಿರಿ, ಹೊನ್ನಾಳಿ, ಸಾಗರ ಮತ್ತು ಹೊಸನಗರ ತಾಲ್ಲೂಕುಗಳಲ್ಲಿ ಅಂತಹ ಯಾವ ಜಮೀನೂ ಇರುವುದಿಲ್ಲವೆಂದು ಆಯಾ ತಹಶೀಲ್ದಾರರು ತಿಳಿಸಿರುವರು. ಸೊರಬ ತಾಲ್ಲೂಕಿನಲ್ಲಿ ಸುಮಾರು ಎಲ್ಲ ಸರಕಾರಿ ಫಡ ಜಮೀನು ತುಂಗಭದ್ರಾ ಜಲಮೂಲ ಪ್ರದೇಶದಲ್ಲಿ ಬರುವುದೆಂದು ತಿಳಿದು ಬಂದಿದೆ. ಕಾರಣ ಈ ತಾಲ್ಲೂಕಿನಲ್ಲಿಯ ಸರಕಾರಿ ಫಡ ಜಮೀನನ್ನು ಅರಣ್ಯ ಖಾತೆಗೆ ಕಾಡು ನೆಡುವುದಕ್ಕೆ ವರ್ಗಾಯಿಸಲು ಕ್ರಮ ತೆಗೆದುಕೊಳ್ಳಲಾಗುತ್ತಿದೆ.

ಸರಕಾರದ ನೀರಾವರಿ ಯೋಜನೆಗಳಿಂದ ರೈತರಿಗೆ ಅಧಿಕ ಪ್ರಮಾಣದಲ್ಲಿ ಉಪಯೋಗವಾಗಬೇಕೆಂದರೆ ಅಣೆಕಟ್ಟೆಗಳನ್ನು ಸುರಕ್ಷಿತವಾದ ರೀತಿಯಲ್ಲಿ ನೋಡಿಕೊಳ್ಳುವುದು ಅಗತ್ಯ. ಆದ್ದರಿಂದ ತುಂಗಭದ್ರಾ ಅಣೆಕಟ್ಟೆಯ ಭದ್ರತೆಯ ದೃಷ್ಟಿಯಿಂದ, ತುಂಗಭದ್ರಾ ಪ್ರದೇಶದಲ್ಲಿ ವ್ಯವಸಾಯ ಯೋಗ್ಯವಲ್ಲದ ಸರಕಾರಿ ಫಡ ಜಮೀನನ್ನು ಕಾಡು ಬೆಳೆಸಲು ಅರಣ್ಯ ಖಾತೆಗೆ ವರ್ಗಾಯಿಸುವುದು ಸೂಕ್ತವೆಂದು ಸರಕಾರ ಭಾವಿಸುತ್ತದೆ.

ಶ್ರೀ ಎಸ್. ಬಂಗಾರಪ್ಪ.—ಸ್ವಾಮಿ, ತಾವು ಹೇಳಿದ್ದೀರಿ ವ್ಯವಸಾಯಕ್ಕೆ ಯೋಗ್ಯವಲ್ಲದ ಸರ್ಕಾರಿ ಫಡ ಭೂಮಿಯನ್ನು ಕಾಡು ಬೆಳೆಸುವುದಕ್ಕೆ ಕೊಡುತ್ತೇವೆ ಎಂದು. ನಾವು ಪದೇಪದೇ ಸರ್ಕಾರವನು ಕೇಳುತ್ತಿದ್ದೇವೆ. ಮಲೆನಾಡು ಜಿಲ್ಲೆಯಲ್ಲಿ ಅನೇಕ ವರ್ಷಗಳಿಂದ ಒಂದು ಬೇಡಿಕೆ ಇದೆ. ಸಾಗುವಳಿಗೆ ಯೋಗ್ಯವಾಗಿರತಕ್ಕ ಪ್ರದೇಶ ಏನಿದೆ ಅದನ್ನು ಬಡವರಿಗೆ ಹಂಚಿಕೆ ಮಾಡುವುದಕ್ಕೆ ವ್ಯವಸ್ಥೆ ಮಾಡಿ ಎಂಬುದೇ ನಮ್ಮ ಬೇಡಿಕೆ. ಸಾಗುವಳಿಗೆ ಯೋಗ್ಯವಲ್ಲದ ಭೂಮಿ ಇದ್ದರೆ ಅದನ್ನು ಬೇಕಾದರೆ ಕಾಡು ಬೆಳೆಸುವುದಕ್ಕೆ ಬಿಡಿ. ನಿನ್ನೆ ಉತ್ತರ ಕೊಡತಕ್ಕ ಸಂದರ್ಭದಲ್ಲಿ ಮಾನ್ಯ ಮಂತ್ರಿಗಳು ನದಿ ಎಲ್ಲಿ ಹರಿಯುವ